ಜನವರಿ 23, 2006

**ಖಾತಾ ಪಾವತಿ ಚೆಕ್‌ನ ಹಣ ಸಂದಾಯ – ಮೂರನೇ ವ್ಯಕ್ತಿಯ ಖಾತೆಗೆ ಹಣ ಜಮೆ ಮಾಡುವುದರ ಮೇಲೆ ನಿಷೇಧ:**

ಕೆಲವು ವ್ಯಕ್ತಿಗಳು/ಸಂಸ್ಥೆಗಳು ಇತ್ತೀಚೆಗೆ ಆರಂಭಿಕ ಸಾರ್ವಜನಿಕ ಶೇರು ನೀಡಿಕೆ (ಐ.ಪಿ.ಓ.) ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡ ಹಾಗೂ ಸೆಕ್ಯುರಿಟಿಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಎಸ್‌ಇಬಿಐ) ದಿಂದ ಬಂದ ವರದಿಯ ಹಿನ್ನೆಲೆಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕು, ಕೆಲವರು ವ್ಯವಸ್ಥೆಯಲ್ಲಿ ಕೈವಾಡ ನಡೆಸಲು ಅಳವಡಿಸಿಕೊಂಡ ಕಾರ್ಯ ವಿಧಾನವನ್ನರಿಯಲು ಕೆಲವು ಬ್ಯಾಂಕುಗಳ ವಿವರಪೂರ್ಣ ತನಿಖೆ ನಡೆಸಿತು. ಸಾಕಷ್ಟು ಸೂಚನೆಗಳನ್ನು ನೀಡಿದ್ದರೂ, ಡಿಪಿ ಒದಗಿಸುವವರ ಸಹಚರರ ಕೋರಿಕೆಯ ಮೇರೆಗೆ ಬ್ಯಾಂಕುಗಳು ವ್ಯಕ್ತಿಗಳ ಖಾತಾ ಪಾವತಿ ಮರುಪಾವತಿ ಆದೇಶಗಳ ಉತ್ಪತ್ತಿಗಳನ್ನು ವೈಯಕ್ತಿಕ ಖಾತೆಗಳಿಗೆ ಜಮೆ ಮಾಡದೇ ದಲ್ಲಾಳಿಗಳ ಖಾತೆಗೆ ಜಮೆ ಮಾಡಿರುವುದು ಗಮನಕ್ಕೆ ಬಂದಿದೆ. ಹಣ ಸಂದಾಯ ವ್ಯವಸ್ಥೆಯಲ್ಲಿ ನಡೆದ ಕೈವಾಡದಿಂದಾಗಿ ಅಕ್ರಮಕ್ಕೆ ಅವಕಾಶವಾಗಿದೆ. ಖಾತಾ ಪಾವತಿ ಚೆಕ್‌ಗಳ ಹಣ ಸಂದಾಯದ ವಿಷಯದಲ್ಲಿ ಇರುವ ಕಾರ್ಯವಿಧಾನವನ್ನು ಬ್ಯಾಂಕುಗಳು ಬದಲಿಸದೆ ಇದ್ದಿದ್ದರೆ ಈ ರೀತಿಯ ಕೈವಾಡಕ್ಕೆ ಅವಕಾಶವಾಗುತ್ತಿರಲಿಲ್ಲ. ಈ ರೀತಿ ಕಾರ್ಯವಿಧಾನವನ್ನು ಬದಲಿಸುವುದು ವಿವೇಚನಾಯುಕ್ತ ಚಾಲ್ತಿ ಪದ್ಧತಿ ಎಂದು ಅಂಗೀಕರಿಸಲಾಗದು. ಏಕೆಂದರೆ ಇದು ಬ್ಯಾಂಕುಗಳನ್ನು ವಿವಿಧ ತೊಂದರೆಗಳಿಗೆ ಗುರಿ ಮಾಡಬಲ್ಲದು.

ಬ್ಯಾಂಕುಗಳು ಚೆಕ್‌ನಲ್ಲಿ ಹೆಸರಿಸಲಾದ ವ್ಯಕ್ತಿಯ ಖಾತೆಗಲ್ಲದೇ ಬೇರೊಬ್ಬ ವ್ಯಕ್ತಿಯ ಖಾತೆಗೆ ಖಾತಾ ಪಾವತಿ ಚೆಕ್ಕನ್ನು ಜಮೆ ಮಾಡುವುದನ್ನು ನಿಷೇಧಿಸುವುದು ಅಗತ್ಯವೆಂದು ರಿಸರ್ವ್ ಬ್ಯಾಂಕು ಭಾವಿಸುತ್ತದೆ. ತದನುಸಾರವಾಗಿ ರಿಸರ್ವ್ ಬ್ಯಾಂಕು, ಖಾತೆದಾರನಲ್ಲದ ಯಾವೊಬ್ಬ ವ್ಯಕ್ತಿಯ ಹೆಸರಿಗೆ ಖಾತಾ ಪಾವತಿ ಚೆಕ್‌ಗಳನ್ನು ಸಂಗ್ರಹಿಸಬಾರದೆಂದು ಬ್ಯಾಂಕುಗಳಿಗೆ ನಿರ್ದೇಶನ ನೀಡಿದೆ.

ಈ ಕುರಿತ ಒಂದು ಸುತ್ತೋಲೆಯನ್ನು ಆರ್‌ಬಿಐ ವೆಬ್‌ಸೈಟ್‌ನಲ್ಲಿ (www.rbi.org.in) ಹಾಕಲಾಗಿದೆ.

ಪಿ.ವಿ. ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2005–2006/928